# UNIVERSITY COLLEGE MANGALORE
## ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು
ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜು
(ನ್ಯಾಕ್, "ಎ" ಶ್ರೇಣಿ ಮತ್ತು ಯುಜಿಸಿಯಿಂದ ಶ್ರೇಷ್ಠತಾ ಸಾಮರ್ಥ್ಯದ ಸಂಸ್ಥೆ ಮಾನ್ಯತೆ ಪಡೆದಿದೆ)

**Office of the Principal,**
**Mangalore 575 001**
**Phone No: 2424760**

**ಪ್ರಾಂಶುಪಾಲರ ಕಛೇರಿ,**
**ಮಂಗಳೂರು 575 001**
**ದೂರವಾಣಿ ಸಂಖ್ಯೆ: 2424760**


## ಸ್ವಾತಂತ್ರ್ಯದ ಅಮೃತ ಮಹೋತ್ಸವ: ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳು

ಭಾರತ ಸರ್ಕಾರವು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಜನೋತ್ಸವವಾಗಿ, ಹಲವು ಕಾರ್ಯಕ್ರಮಗಳನ್ನು ಸರಣಿಯಾಗಿ ಆಚರಿಸಲು ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ವಿಶ್ವವಿದ್ಯಾನಿಲಯಗಳು/ ಪದವಿ ಕಾಲೇಜುಗಳು ವೈವಿಧ್ಯಮಯವಾಗಿ ಮತ್ತು ವಿವಿಧ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ಸ್ವಾತಂತ್ರ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಉದ್ದೇಶಿಸಲಾಗಿದೆ.

ಭಾರತ ಸರ್ಕಾರ ನಮ್ಮ ದೇಶದ ಉಜ್ವಲ ಇತಿಹಾಸ, ವೈಭವಯುತ ಸಾಂಸ್ಕೃತಿಕ ಪರಂಪರೆ, ಶೌರ್ಯ ಪರಾಕ್ರಮ ಹಾಗೂ ಅದ್ಭುತ ಸಾಧನೆಗಳನ್ನು ಸಾಮೂಹಿಕ ಸ್ಮರಣೆಯಲ್ಲಿ ಹಸಿರಾಗಿಸಲು ಹಾಗೂ ರಾಷ್ಟ್ರದ ಘನತೆಯನ್ನು ವೃದ್ಧಿಸುವ ಚಟುವಟಿಕೆಗಳಲ್ಲಿ ನಾಡಿನ ಜನತೆಯನ್ನು ಪ್ರೇರೇಪಿಸಲು 'ಸ್ವಾತಂತ್ರ್ಯದ ಅಮೃತ ಮಹೋತ್ಸವ' ದ ಉಪಕ್ರಮವನ್ನು ಮಾರ್ಚ್ 12, 2021 ರಿಂದ ಆಗಸ್ಟ್ 15, 2023 ರವರೆಗೆ ಆಯೋಜಿಸಿದೆ.

15 ನೇ ಆಗಸ್ಟ್, 2022 ರಂದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷಗಳು ಪೂರ್ಣಗೊಳ್ಳುತ್ತವೆ. ಈ ಶುಭಸಂದರ್ಭದಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳು, ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ರಾಷ್ಟ್ರದ ಸ್ವಾತಂತ್ರ್ಯದ ಮಹೋನ್ನತ ಇತಿಹಾಸದ ಕ್ಷಣಗಳನ್ನು ನೆನಪಿಸಿ, ನಮ್ಮ ದೇಶವನ್ನು ಪ್ರಗತಿ ಪಥದಲ್ಲಿ ಸ್ಥಿರವಾಗಿ ನಿಲ್ಲಿಸುವಂತಹ ಪೂರಕ ಕಾರ್ಯಕ್ರಮಗಳನ್ನು ಆಯೋಜಿಸಲು ಉದ್ದೇಶಿಸಲಾಗಿದೆ.

ಈ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾನಿಲಯಗಳು/ಪದವಿ ಕಾಲೇಜುಗಳಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ತರಗತಿ ಸ್ತರದಲ್ಲಿ ಸ್ವಾತಂತ್ರ್ಯ ಚಳುವಳಿಯ ಕುರಿತು ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುವುದು. ಜೊತೆಗೆ ಭಾರತದ ಸ್ವಾತಂತ್ರ್ಯ ಚಳುವಳಿಯ ಕುರಿತು ಆಯೋಜಿಸಬಹುದಾದ ವಿವಿಧ ಸ್ಪರ್ಧೆಗಳ ಪಟ್ಟಿ ಈ ರೀತಿಯಿದೆ.

1. ಪ್ರಬಂಧ ಸ್ಪರ್ಧೆ 2. ಚರ್ಚಾ ಸ್ಪರ್ಧೆ 3.ಪೇಂಟಿಂಗ್ ಸ್ಪರ್ಧೆ 4.ದೇಶಭಕ್ತಿಗೀತೆಗಳ ಸ್ಪರ್ಧೆ 5.ಕಿರುನಾಟಕಗಳ ಸ್ಪರ್ಧೆ 6. ಪೋಸ್ಟರ್ ತಯಾರಿಕೆ ಸ್ಪರ್ಧೆ 7. ಸ್ವಾತಂತ್ರ್ಯ ಓಟ ಸ್ಪರ್ಧೆ

ಸ್ಪರ್ಧೆಗಳು ಕಾಲೇಜು ಹಂತ, ವಿಶ್ವವಿದ್ಯಾನಿಲಯ ಹಂತ, ವಿಶ್ವವಿದ್ಯಾನಿಲಯ ಅಂತರ್ ಘಟಕ ಹಂತ ಹಾಗೂ ರಾಜ್ಯಮಟ್ಟದಲ್ಲಿ ನಡೆಯಲಿವೆ. ಪ್ರತಿ ಹಂತದಲ್ಲೂ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಗುವುದು.

ವಿ.ಸೂ: ಸ್ಪರ್ಧೆಗಳ ಕುರಿತು ಕಾಲಕಾಲಕ್ಕೆ ಮಾಹಿತಿಯನ್ನು ಹಂಚಿಕೊಳ್ಳಲಾಗುವುದು. ಆಸಕ್ತ ವಿದ್ಯಾರ್ಥಿಗಳು ಭಾಗವಹಿಸಿ ಮಹೋತ್ಸವದ ಭಾಗವಾಗಬಹುದು.

Principal
University College
Mangalore - 575 001, D.K